

### ಶಿವ ಶಿವಾ..

ನ. 28 ಸಂಚಿಕೆಯಲ್ಲಿ ಪ್ರಕಟವಾದ ಟಿ.ಆರ್. ಅನಂತರಾಮು ಲೇಖನ 'ಶಿವ... ಶಿವ... ನೆಲ ಮುಗಿಲು ವಿಷವಾಯ್ತು!' ಅರ್ಥಪೂರ್ಣ ಆಗಿತ್ತು. ಇತ್ತೀಚೆಗೆ ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ಭೀಕರ ನೆರೆ ಹಾವಳಿ, ಅಮೆಜಾನ್ ಕಾಡುಗಳಲ್ಲಿ ಬೆಂಕಿ, ಹಲವು ದೇಶಗಳಲ್ಲಿ ಸಂಭವಿಸಿದ ಚಂಡಮಾರುತ, ಭೂಕಂಪ ಮುಂತಾದ ಪ್ರಕೃತಿ ವಿಕೋಪಗಳಿಗೆ ಮಾನವನ ಸ್ವಾರ್ಥವೇ ಕಾರಣ. ಇಂಡೊನೇಷ್ಯಾದ ರಾಜಧಾನಿ ಜಕಾರ್ತಾ ಇನ್ನು 25 ವರ್ಷಗಳಲ್ಲಿ ಮುಳುಗಿ ಹೋಗಲಿದೆ. ನಮ್ಮ ದೇಶದ ಮಹಾನಗರಗಳೂ ಒಂದಲ್ಲ ಒಂದು ರೀತಿಯಲ್ಲಿ ಅಪಾಯದ ಅಂಚಿನಲ್ಲಿವೆ. ಇವಕ್ಕೆಲ್ಲ ಹೆಚ್ಚುತ್ತಿರುವ ಜಾಗತಿಕ ತಾಪಮಾನವೇ ಕಾರಣ ಎಂಬುದನ್ನು ಅಲ್ಲಗಳೆಯುವಂತಿಲ್ಲ. ನಾವೆಲ್ಲ ಎಚ್ಚೆತ್ತುಕೊಳ್ಳದೇ ಹೋದಲ್ಲಿ ಮುಂದೊಂದು ದಿನ ಇಡೀ ಭೂಮಿಯೇ ನಿರ್ನಾಮವಾಗುವ ಸಾಧ್ಯತೆಗಳು ದಟ್ಟವಾಗಿವೆ.

—ಎಚ್. ಆರ್. ವಸ್ತ್ರದ, ಧಾರವಾಡ

'ನೆಲ ಮುಗಿಲು ವಿಷವಾಯ್ತು!' ಲೇಖನ ನಮಗೆಲ್ಲ ಎಚ್ಚರಿಕೆಯ ಗಂಟೆ. ಲೇಖಕರು ಎಲ್ಲ ವಿವರಗಳನ್ನೂ ಅಂಕಿ ಅಂಶಗಳೊಡನೆ ತಿಳಿಸಿಕೊಟ್ಟಿದ್ದಾರೆ. ದೆಹಲಿಯ ಹೊಂಜಿಗೆ, ಅತಿವೃಷ್ಟಿಗೆ, ಬರಗಾಲಕ್ಕೆ ಮೂಲ ಕಾರಣ ಇದೀಗ ಸ್ಪಷ್ಟವಾಗಿದೆ. ಅಮೇರಿಕ ಮುಂತಾದ ರಾಷ್ಟ್ರಗಳು ಸಹಕರಿಸಲು ಹಿಂದೇಟು ಹೊಡೆಯುತ್ತಿರುವುದರ ಹಿನ್ನೆಲೆಯಲ್ಲಿ ಅವು ಪೋಲು ಮಾಡುತ್ತಿರುವ ವಿದ್ಯುತ್ ಮತ್ತಿತರ ಸಂಪನ್ಮೂಲಗಳ ಅಂಕಿ ಅಂಶಗಳೂ ಗಾಬರಿ ಹುಟ್ಟಿಸುತ್ತವೆ. ಹವಾನಿಯಂತ್ರಿತ ನಗರ ಎನ್ನಿಸಿಕೊಂಡಿದ್ದ ಬೆಂಗಳೂರಿನಲ್ಲಿ ನಾವು ಎ.ಸಿ, ಫ್ರಿಡ್ಜ್ ಅಷ್ಟೇಕೆ, ವಿದ್ಯುತ್ ಪಂಖ ಕೂಡ ಇಲ್ಲದೆ ಬೆಳೆದಿದ್ದೆವು. ಆದರೆ ಇಂದು ಅದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ ಎನ್ನುವಷ್ಟು ವಾತಾವರಣ ಹದಗೆಟ್ಟಿದೆ.

—ಬಿ.ಎಸ್. ಶೈಲಜಾ, ಜವಾಹರಲಾಲ್ ನೆಹರೂ ತಾರಾಲಯ, ಬೆಂಗಳೂರು

ಮನುಷ್ಯರಾದ ನಾವು ದುರಾಸೆಯೆಂಬ ಮೋಹಿನಿ ಕುಣಿಸಿದಂತೆ ಕುಣಿದು ನಮ್ಮ ತಲೆಯ ಮೇಲೆ ನಾವೇ ಕೈಯಿಟ್ಟುಕೊಂಡು ಭಸ್ಮಾಸುರರು ಆಗುತ್ತಿದ್ದೇವೆ.ವಿಶ್ವಸಂಸ್ಥೆ ಅಧಿವೇಶನದಲ್ಲಿ ಡೊನಾಲ್ಡ್ ಟ್ರಂಪ್, ಹದಿನಾರರ ಹರೆಯದ ಹೋರಾಟಗಾರ್ತಿ ಗ್ರೇಟಾಳನ್ನು ಎದುರುಗೊಂಡಾಗ ನಡೆಸಿಕೊಂಡ ರೀತಿಯೇ ಇದಕ್ಕೆ ಸಾಕ್ಷಿ. ಭೂಮಿಗೆ ಒದಗುತ್ತಿರುವ ಈ ಅಪಾಯನ್ನು ಅನಂತರಾಮು ಅವರ ಲೇಖನ ಸವಿವರವಾಗಿ ತಿಳಿಸಿಕೊಟ್ಟಿದೆ.

—ಸುಬ್ರಹ್ಮಣ್ಯ ಕಲ್ಲೂರ,ಬೆಂಗಳೂರು



### ಕೋ ಸಮೂಯಿ

ನ. 28ರ ಸಂಚಿಕೆಯಲ್ಲಿ ಗಾಯತ್ರಿ ರಾಜ್ ಬರೆದಿರುವ 'ಕೋ ಸಮೂಯಿ' ಲೇಖನ ಚೆನ್ನಾಗಿತ್ತು. ಆದರಾತಿಥ್ಯಕ್ಕೆ ಹೆಸರುವಾಸಿಯಾಗಿರುವ ಥಾಯ್ಲೆಂಡ್‌ನ ಅಪೂರ್ವ ಪ್ರಾಕೃತಿಕ ಸೌಂದರ್ಯ, ಬಿಗ್ ಬುದ್ಧ, ಕೋ ಸಮೂಯಿ ಸುಂದರ ಬೀಚ್‌ಗಳ ರಮಣೀಯ ದೃಶ್ಯಗಳನ್ನು ಸೊಗಸಾಗಿ ಪರಿಚಯಿಸಿದ್ದಾರೆ.

—ಪಿ. ಜಯವಂತ ಪೈ,ಕುಂದಾಪುರ

### ಜಾಗೃತಿ ಮೂಡಿಸುವ ಲೇಖನ

ನ.14ರ ಸಂಚಿಕೆಯಲ್ಲಿ ಡಾ. ಜಿ ಜಿ ಸಾಂಬಮೂರ್ತಿ ಅವರು ಬರೆದ 'ಡಯಾಬಿಟಿಸ್' ಲೇಖನ ಮಧುಮೇಹಿಗಳಲ್ಲಿ ಜಾಗ್ರತೆ ಹಾಗೂ ಆಶಾಭಾವನೆ ಬದುಕಿನ ಕುರಿತು ಭರವಸೆಯನ್ನು ನೀಡುತ್ತದೆ. ಜೀವನಶೈಲಿಯಲ್ಲಿ ಬದಲಾವಣೆ ಹಾಗೂ ಡಯಾಬಿಟಿಸ್ ಅನ್ನು ಹತೋಟಿಯಲ್ಲಿ ಇಡುವ ಬಗೆ ಹೇಗೆ ಎನ್ನುವುದನ್ನು, ಆಯುರ್ವೇದ ಪದ್ಧತಿಯ ಮಹತ್ವವನ್ನು ಹಂತ ಹಂತವಾಗಿ ವಿವರಿಸಿದ್ದಾರೆ. ಅನುಸರಣೆ ಮಾಡುವ ಉತ್ತಮ ಲೇಖನ.



ಉಮಾ ಅನಂತ್ ಅವರ 'ಮಕ್ಕಳ ನೆನಕೆಯಲ್ಲಿ ಹೆತ್ತವರ ಕನವರಿಕೆ' ಕೂಡ ಮನಕಲಕುವ ಲೇಖನ. ಸಂಬಂಧಗಳು ಶಿಥಿಲವಾಗಿ ಸಂಕುಚಿತ ಸ್ವಾರ್ಥ ಸಮಾಜ ನಿರ್ಮಾಣಗೊಳ್ಳುತ್ತಿದೆ ಎನ್ನುವ ಕಟುಸತ್ಯ ಇಲ್ಲಿದೆ.

—ಸುಭದ್ರ ಹೆಗಡೆ ,ಅಹ್ಮದಾಬಾದ್

### ಯಾವುದು ಅನೈತಿಕ?



ನ. 14ರ ಸಂಚಿಕೆಯಲ್ಲಿ ಪ್ರಕಟವಾದ ಗಾಯತ್ರಿ ಯತಿರಾಜ್ ಅವರು ಬರೆದ 'ಯಾವುದು ಅನೈತಿಕ' ಕಥೆ ಮಾರ್ಮಿಕವಾಗಿದೆ. ಕಥೆಯು ಹೊಮ್ಮಿಸುವ ಧ್ವನಿ ಸಮಂಜಸವಾದದ್ದು. ಅರುಂಧತಿಯ ಕಳವಳ ಮನಮುಟ್ಟುವ ಹಾಗಿದೆ. ಗಂಡನೆಂಬ ಪ್ರಾಣಿಯಿಂದ, ಅತ್ತೆ ಎಂಬ ಮೃಗದಿಂದ ಬಂಜೆ ಎಂಬ ನುಡಿ ಕೇಳಲಾಗದೆ ಇಂಥ ಧೈರ್ಯ ಮಾಡಿದ ಸ್ತ್ರೀ ಹೇಗೆ ಅನೈತಿಕಳಾಗುತ್ತಾಳೆ? ಮಿತ್ರೆ ಸುಮಿ, ತಿಳಿದೂ ತಿಳಿಯದಂತೆ ತಿಳಿವಳಿಕೆ ಹೇಳುವುದೂ ಅಷ್ಟೇ ಗಮನಾರ್ಹವಾಗಿದೆ.

— ಎಸ್.ಕೆ. ಚಿಕ್ಕೇರೂರ, ಧಾರವಾಡ

### ಕುತೂಹಲಕಾರಿ ಕಿರುಚಿತ್ರಗಳು

ಪ್ರತಿವಾರ ಸುಧಾ ಪತ್ರಿಕೆಯಲ್ಲಿ ಗೌರಿ ಅವರು ಬರೆಯುತ್ತಿರುವ 'ಕಿರುಚಿತ್ರ' ಅಂಕಣವನ್ನು ತಪ್ಪದೇ ನೋಡುತ್ತಿದ್ದೇನೆ. ಅದರಲ್ಲಿನ ಕಿರುಚಿತ್ರಗಳು ಮತ್ತು ಅವುಗಳ ಬಗ್ಗೆ ಅವರ ವಿವರಣೆಯೂ ಚೆನ್ನಾಗಿರುತ್ತವೆ. ಇಂಥದ್ದೊಂದು ಅಂಕಣ ನೀಡುತ್ತಿರುವ ಪತ್ರಿಕೆಗೆ ಧನ್ಯವಾದಗಳು. ಹೀಗೆ ಸಾಗಲಿ 'ಕಿರುಚಿತ್ರ'ದ ಪಯಣ.

—ಪ್ರವೀಣ್ ಕುಮಾರ್ ಜಿ., ಬೆಂಗಳೂರು

### ಒಳ್ಳೆಯ ಪದ್ಯಗಳು

ನ.21ರ ಸಂಚಿಕೆಯಲ್ಲಿ ಚಾಚಾ ನೆಹರೂ ಅವರನ್ನು ನೆನಪಿಸಿಕೊಂಡು ಅರವಿಂದ ಚೊಕ್ಕಾಡಿ ರಚಿಸಿರುವ ಹಾಡು ಮೆಚ್ಚುಗೆಗೆ ಅರ್ಹ. 'ರೇಡಿಯೊ ಹಾಸ್ಯ ಬ್ರಹ್ಮ' ಎಸ್.ಎನ್. ಶಿವಸ್ವಾಮಿಯವರು ಈಗ ಶತಾಯುಷಿಗಳಾಗಿರುವರೆಂಬ ಲೇಖನವೂ ಚೆನ್ನಾಗಿತ್ತು.

—ಸರ್ವಜಿತ, ಹುಬ್ಬಳ್ಳಿ

### ಗಂಡ ಹೆಂಡತಿ ಮುನಿಸು

ನ.14ರ ಸಂಚಿಕೆಯಲ್ಲಿ ಕೋಡಿಬೆಟ್ಟು ರಾಜಲಕ್ಷ್ಮಿ ಬರೆದಿರುವ 'ಗಂಡ ಹೆಂಡತಿ ಮುನಿಸು' ಲೇಖನ ಕೌಟುಂಬಿಕ ಜವಾಬ್ದಾರಿಯನ್ನು ಎಚ್ಚರಿಸುವಂತಿತ್ತು. 'ಅಪ್ಪ–ಅಮ್ಮನ ಜಗಳದಲ್ಲಿ ಕೂಸು ಬಡವಾಯ್ತು' ಎಂಬ ಗಾದೆಯೇ ಇದೆ. ಮಕ್ಕಳಿಗೆ ಅಪ್ಪ, ಅಮ್ಮ ಇಬ್ಬರ ಪ್ರೀತಿಯೂ ದೊರೆತರೆ ಉತ್ತಮ ನಾಗರಿಕರಾಗುತ್ತಾರೆ.

—ಕೆ. ಪ್ರಕಾಶ್, ಚಿಕ್ಕಮಗಳೂರು

### ಮಂಗಳಮುಖಿಯರ ಮಾಡೆಲಿಂಗ್

ಡಿ. 5ರ ಸಂಚಿಕೆಯಲ್ಲಿ ರಾಘವೇಂದ್ರ ಕೆ. ಅವರು ಬರೆದಿರುವ 'ಮಂಗಳಮುಖಿಯರ ಮಾಡೆಲಿಂಗ್' ಚೆನ್ನಾಗಿತ್ತು.

ತಮ್ಮದಲ್ಲದ ತಪ್ಪಿಗೆ ಸಮಾಜದಿಂದ ಅನಿವಾರ್ಯವಾಗಿ ದೂರವಿದ್ದು ಬದುಕು ಕಟ್ಟಿಕೊಳ್ಳುವ ಸೆಣಸಾಟದಲ್ಲಿರುವ ವರ್ಗದವರನ್ನು ಗುರುತಿಸಿ, ಮಾನವೀಯತೆ ಮೆರೆದಿರುವುದು ಶ್ಲಾಘನೀಯ. ಮತ್ತು ಸಮಾಜದ ಮುಖ್ಯವಾಹಿನಿಗೆ ಕರೆತರುವಲ್ಲಿ ಈ ಪ್ರಯತ್ನ ನಿಜಕ್ಕೂ ಸಹಕಾರಿ.

—ಕೆ.ವಿ.ರಾಜಲಕ್ಷ್ಮಿ , ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in